

# ನರಿ ಮತ್ತು ಕುರಿ

ಒಂದಾನೊಂದು ಕಾಡಿನಲ್ಲಿ ಒಂದು ಸಮಾರಂಭ ನಡೆಯುತ್ತಿತ್ತು. ಅಲ್ಲಿ ಕಾಡಿನ ರಾಜನಾದ ಸಿಂಹರಾಜನ 50ನೇ ಹುಟ್ಟುಹಬ್ಬವಿತ್ತು. ಸಿಂಹರಾಜನು ಕಾಡಿನ ಎಲ್ಲ ಪ್ರಾಣಿಗಳನ್ನು ಆಮಂತ್ರಿಸಿದನು. ಎಲ್ಲ ಪ್ರಾಣಿ–ಪಕ್ಷಿಗಳು ಸಿಂಹರಾಜನಿಗೆ ಉಡುಗೊರೆಯಾಗಿ ಹಣ್ಣು– ಹಂಪಲು, ಮಾಂಸದ ತುಂಡುಗಳು, ಒಳ್ಳೆ ಕಟ್ಟಿಗೆಯ ಸಿಂಹಾಸನ, ಶುದ್ಧವಾದ ರೇಷ್ಮೆಯ ಹಾಸಿಗೆ, ವಿಧ ವಿಧವಾದ ಉಡುಗೊರೆಗಳನ್ನು ತಂದಿದ್ದವು. ಅದರಂತೆ ನರಿಯು ಸಿಂಹರಾಜನಿಗಾಗಿ ರುಚಿಯಾದ, ಮೃದುವಾದ ತಾಜಾ ತಾಜಾ ಮೊಲದ ಮಾಂಸವನ್ನು ತಂದಿತ್ತು.

ಸಮಾರಂಭ ನಡೆಯುತ್ತಿತ್ತು, ನರಿಯ ಹತ್ತಿರ ಒಂದು ಕುರಿಯು ಕುಳಿತಿತ್ತು, ನರಿಯು 'ಏ ಕುರಿಯೇ, ಸಿಂಹರಾಜನಿಗೆ ಉಡುಗೊರೆ ಏನು ತಂದಿದ್ದೀಯಾ?' ಎಂದು ಕೇಳಿತು.

'ನಾನು ಏನು ತರಲಿ, ನಾನೊಬ್ಬ ಬಡವ, ನಾನು ತಿನ್ನುವ ತಪ್ಪಲು ಮಾತ್ರ ತರಬೇಕಾಗಿತ್ತು, ಆದರೆ ಸಿಂಹರಾಜ ಅದನ್ನು ತಿನ್ನುವುದಿಲ್ಲ. ಅದಕ್ಕೆ ಬರಿಗೈಯಲ್ಲಿ ಬಂದೆ' ಎಂದು ಹೇಳಿತು.

'ದುಷ್ಟ, ಉಡುಗೊರೆ ತರದೆ ಇನ್ನೇಕೆ ಬಂದೆ? ಪುಕ್ಕಟೆ ಊಟ ಮಾಡಿ ಹೋಗೋಕೆ ಬಂದೆಯಾ? ಸರಿ ಸರಿ ಆ ಕಡೆ, ನಿಮ್ಮಂತವರು ನಮ್ಮ ಹತ್ತಿರ ಕುಳಿತುಕೊಳ್ಳಬಾರದು' ಎಂದು ನರಿಯು ಹೇಳಿತು. ಕುರಿಯು 'ತಪ್ಪಾಯಿತು ನರಿಯೇ...' ಎಂದು ಸರಿದು ಕುಳಿತುಕೊಂಡಿತು. ಉಡುಗೊರೆ ಕೊಡುವ ಸರದಿ ಬಂದಾಗ ನರಿಯು ಮೊಲದ ಮಾಂಸವನ್ನು ಕೊಟ್ಟಾಗ ಸಿಂಹರಾಜನು 'ಶಹಭಾಶ್ ನರಿಯೇ, ಉತ್ತಮ ಉಡುಗೊರೆ' ಎಂದು ಹರಸಿತು. ಅದೇ ರೀತಿ ಕುರಿಯ ಸರದಿ ಬಂದಾಗ 'ಉಡುಗೊರೆ ತರದ ಕುರಿಯನ್ನು ಸಿಂಹರಾಜನು ಸಿಟ್ಟಿನಿಂದ ಕುರಿಯನ್ನೇ ತಿನ್ನಬಹುದು' ಎಂದು ನರಿ ಊಹಿಸಿಕೊಂಡು ನೋಡತೊಡಗಿತು.



'ಕಾಡಿನ ಮಹಾರಾಜ ಸಿಂಹರಾಜನೇ, ನಿಮಗೆ ಉಡುಗೊರೆಯಾಗಿ ಕೊಡಲು ನನ್ನ ಹತ್ತಿರ ಏನೂ ಇಲ್ಲ, ಆದರೆ ನಿಮ್ಮ ಹುಟ್ಟುಹಬ್ಬದ ದಿನದಂದು ಎಲ್ಲರೂ ನಿಮಗೆ ಉಡುಗೊರೆಯನ್ನು ಕೊಡುತ್ತಿದ್ದಾರೆ. ಪಾಪ ನಿಮ್ಮ ಸಣ್ಣ ಮಗನಿಗೆ ಯಾರೂ ಊಟವನ್ನು ಕೊಡುತ್ತಿಲ್ಲ. ಆದ್ದರಿಂದ ನಿಮ್ಮ ಕಂದನಿಗೆ ನಾನು ನನ್ನ ಮೊಲೆಹಾಲನ್ನು ಕುಡಿಸುವೆ' ಎಂದು ಕುರಿಯು ಸಿಂಹದ ಮರಿಗೆ ಹಾಲನ್ನು ಕುಡಿಸಿತು. ಇದರಿಂದ ಸಿಂಹರಾಜನಿಗೆ ಸಂತೋಷವಾಗಿ ಕುರಿಯನ್ನು ಹೊಗಳಿ ಒಳ್ಳೆಯ ಉಡುಗೊರೆ ಕೊಟ್ಟಿತು.

ಸಮಾರಂಭ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗತೊಡಗಿದರು. ಅದರಂತೆ ಕುರಿಯು ತನ್ನ ಮನೆಯ ಕಡೆ ಹೊರಟಿತು. ದಾರಿಯಲ್ಲಿ ಪ್ರತ್ಯಕ್ಷವಾದ ನರಿಯು 'ಏ ಕುರಿಯೇ, ಸಿಂಹರಾಜನು ನನಗಿಂತಲೂ ನಿನ್ನನ್ನು ತುಂಬಾ ಹೊಗಳಿದ್ದಾನೆ. ನನಗೆ ಸಿಟ್ಟು ಬಂದಿದೆ. ಆದ್ದರಿಂದ ಈಗ ನಿನ್ನನ್ನು ಸಿಗಿದು ಬಗೆದು ಸಾಯಿಸಿ ತಿಂದುಬಿಡುತ್ತೇನೆ, ಕೊನೆಯದಾಗಿ ದೇವರನ್ನು ಸ್ಮರಿಸು' ಎಂದಿತು.

ಅಯ್ಯೋ ಇನ್ನೇನು ತನ್ನ ಜೀವ ಹೋಗುತ್ತದೆ. ಈ ದುಷ್ಟ ನರಿಯ ಕೈಯ್ಯಲ್ಲಿ ಸಿಕ್ಕಿ ಸಾಯುವುದಕ್ಕಿಂತಲೂ ಉಪಾಯ ಮಾಡಿ ಪಾರಾಗೋಣವೆಂದುಕೊಂಡ ಕುರಿ, 'ಏ ನರಿಯಣ್ಣ, ನಾನು ದುರ್ಬಲನು. ನಿನ್ನನ್ನು ಎದುರಿಸುವ ಶಕ್ತಿ ನನಗೆ ಇಲ್ಲ, ನನ್ನನ್ನು ಬಿಟ್ಟುಬಿಡು. ಮನೆಯಲ್ಲಿ ನನ್ನ ಮಗ ಒಬ್ಬನೇ ಇದ್ದಾನೆ. ಅವನಿಗೆ ಹಾಲು ಕುಡಿಸಬೇಕು. ಮತ್ತೊಂದು ಸಲ ಭೇಟಿಯಾದಾಗ ನನ್ನನ್ನು ನೀನು ತಿನ್ನಬಹುದು' ಎಂದು ಕೇಳಿತು. ಆಗ ನರಿಯು 'ಇಲ್ಲ ಇಲ್ಲ ನಿನ್ನನ್ನು ಬಿಡಲಾರೆ. ಸಿಗಿದು ಬಗೆದು ಸಾಯಿಸಿ ತಿಂದುಬಿಡುತ್ತೇನೆ' ಎಂದು ಮುಂದೆ ಬಂದಿತು.

'ಆಯಿತು ನನ್ನನ್ನು ತಿಂದುಬಿಡು. ಸಮಾರಂಭದಲ್ಲಿ ಸಿಂಹರಾಜ ಕೊಟ್ಟಿದ್ದ ಉಡುಗೊರೆ ನಾನು ಬರುವಾಗ ಎಲ್ಲೋ ಬಿದ್ದು ಹೋಯಿತು, ಅದನ್ನಾದರೂ ನಿನಗೆ ಕೊಡೋಣ ಅಂದರೆ ಅದೂ ಇಲ್ಲ' ಎಂದಿತು.

'ಉಡುಗೊರೆ? ಏನದು, ಎಲ್ಲಿ ಬಿತ್ತು?' ಎಂದು ಕುತೂಹಲದಿಂದಲೇ ಕೇಳಿತು ನರಿ.

'ನಾನು ಸಿಂಹರಾಜನ ಮಗನಿಗೆ ಹಾಲು ಕುಡಿಸಿದ್ದರಿಂದ ಸಿಂಹರಾಜನು ಒಂದು ಕೆಂಪು ಬಣ್ಣದ ಮಂತ್ರದ ಕಲ್ಲು ಕೊಟ್ಟಿದ್ದಾನೆ. ಹಸಿವಾದಾಗ ನೀನು ಬೇಡಿದ ಆಹಾರ ನಿನಗೆ ಪ್ರತ್ಯಕ್ಷವಾಗುತ್ತದೆ. ಆದರೆ ಅದು ಎಲ್ಲೋ ಬಿದ್ದುಬಿಟ್ಟಿತು' ಎಂದು ಕುರಿಯು ಹೇಳುತ್ತಿದ್ದಂತೆಯೆ ನರಿಯು ಕುರಿ ಬಂದ ದಾರಿಯಲ್ಲಿ ಕೆಂಪುಬಣ್ಣದ ಕಲ್ಲನ್ನು ಹುಡುಕುತ್ತ ಓಡತೊಡಗಿತು.

ಶಕ್ತಿಯಿಂದ ಅಲ್ಲದಿದ್ದರೂ ಯುಕ್ತಿಯಿಂದ ಮಾಡಿದ ಉಪಾಯ ಫಲಿಸಿತು. ಇದೇ ಸಮಯವೆಂದು ಕುರಿಯು ತನ್ನ ಮನೆ ಕಡೆಗೆ ವೇಗವಾಗಿ ಓಡಿಹೋಯಿತು.

**–ತಯಬಅಲಿ ಅ. ಹೊಂಬಳ, ಗದಗ**